ಅ.ದಾ.ನಂ.518/2015

ಡಿ.ಡಬ್ಲೂ:2

**ಸಾಕ್ಷಿಯನ್ನು ಇಂದು ದಿನಾಂಕಃ 24.01.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ.ಬಿ.ಆರ್.ಎ,. ವಕೀಲರಿಂದ**

**1.** ನನ್ನ ಹೆಂಡತಿ ಮತ್ತು ಪ್ರತಿವಾದಿಯ ಹೆಂಡತಿ ಇಬ್ಬರೂ ಖಾಸ ಅಕ್ಕ ತಂಗಿಯರು ಇರುತ್ತಾರೆ ಎಂದರೆ ಸರಿ. ಶರಣಯ್ಯ ತಂದೆ ಪರುತ್ತಯ್ಯ ಮಠರವರಿಗೆ ಹಣದ ಅಡಚಣೆ ಇತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂಬರ 3 ರಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂಬರ 4 ರಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳಿಗೆ ಪುರಕವಾಗಿ ಪ್ರತಿವಾದಿಯು ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾನೆ. ನಾನು ಪ್ರತಿವಾದಿಯು ಹಾಜರು ಪಡಿಸಿರುವ ದಾಖಲಾತಿಗಳನ್ನು ನೋಡಿರುತ್ತೇನೆ. ನಾನು ಪ್ರತಿವಾದಿಯು ಹಾಜರು ಪಡಿಸಿರುವ ದಾಖಲಾತಿಗಳನ್ನು ನೊಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಸಮಕ್ಷಮದಲ್ಲಿ 2006-2007 ನೇ ಸಾಲಿನಲ್ಲಿ ಮೃತ ಶರಣಯ್ಯನು ತನ್ನ ಆಸ್ತಿಯಾದ ಸರ್ವೆ ನಂ.62 ರಲ್ಲಿ 6 ಎಕರೆ 32 ಗುಂಟೆ ಪೈಕಿ 4 ಎಕರೆ ಜಮೀನುವನ್ನು ಪ್ರತಿವಾದಿಗೆ ವಾಟ್ನಿ ತರೀಕ ಹಕ್ಕು ಬಿಟ್ಟು ಕೊಟ್ಟರಿಉತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯು ಸಂಬಂಧಿಕರು ಆಗಿರುವುದರಿಂದ ನನಗೆ ಈ ಪ್ರಕಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಕೂಡಾ ನಾನು ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**

**ಬಸವನ ಬಾಗೇವಾಡಿ.**